## ಶ್ರೀ ಪುರಂದರ ದಾಸ ಸೇವಾ ಮಂಡಳಿ, ಹೊಸಪೇಟೆ

# ನಡೆದು ಬಂದ ದಾರಿ

ದಾಸ ಶ್ರೇಷ್ಠರಾದ ಪುರಂದರ ದಾಸರು ನಮ್ಮ ಕನ್ನಡ ನಾಡಿನ ಭಾಗ್ಯನಿಧಿ. ಕನ್ನಡ ನಾಡು–ನುಡಿ–ನಡೆಗೆ ಅವರ ಸೇವೆ ಅಪಾರ. 16ನೇ ಶತಮಾನದ ಕನ್ನಡದ ದಾಸ ಸಾಹಿತ್ಯ ಪರಂಪರೆಯ ಆದ್ಯಂತ್ಯದಲ್ಲಿ ಅವರ ಹೆಸರು ವ್ಯಾಪಿಸಿದೆ.

ಶ್ರೀ ಪುರಂದರ ದಾಸರು ಕನ್ನಡ ಸಂಸ್ಕೃತಿಯ ಹಿರಿಮೆ, ಸಮಾಜ ಸುಧಾರಣೆ, ನೀತಿ ಬೋಧನೆ ಹಾಗೂ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ. ಇಂಥ ದಾಸಶ್ರೇಷ್ಠರ ಸ್ಮರಣೆಯನ್ನು ತಮಿಳುನಾಡಿನ ತ್ಯಾಗರಾಜರ ಉತ್ಸವದಂತೆ ಅವರ ಕಾರ್ಯಕ್ಷೇತ್ರವಾದ ಹಂಪಿ–ಹೊಸಪೇಟೆಗಳಲ್ಲಿ ಆಚರಿಸಬೇಕೆಂಬ ಸದುದ್ದೇಶದಿಂದ 1954–ಫೆಬ್ರವರಿ 7ರಂದು ಶ್ರೀ ದಾಸರಾಯರ ಆರಾಧನಾ ಸಂದರ್ಭದಲ್ಲಿ ಹಂಪಿಯ ಶ್ರೀ ವಿಜಯವಿಠಲ ದೇವಸ್ಥಾನದಲ್ಲಿ 'ಕನ್ನಡ ಕುಲಪುರೋಹಿತ' ಶ್ರೀ ಆಲೂರು ವೆಂಕಟರಾವ್, ಧಾರವಾಡ ಇವರ ಅಧ್ಯಕ್ಷತೆಯಲ್ಲಿ "ಶ್ರೀ ಪುರಂದರದಾಸ ಸೇವಾಮಂಡಳಿ" ಸ್ಥಾಪನೆಗೊಂಡು ಇಂದಿಗೆ 50 ವರ್ಷಗಳು ಸಂದಿವೆ.

**ಪ್ರಸ್ತುತ ಮಂಡಳಿಯ ಧ್ಯೇಯಗಳು ಕೆಳಗಿನಂತಿದ್ದವು :**

1) ಹಂಪಿಯಲ್ಲಿರುವ ಶ್ರೀ ಪುರಂದರ ದಾಸರ ಮಂಟಪವನ್ನು ಜೀರ್ಣೋದ್ಧಾರ ಮಾಡುವುದು ಮತ್ತು ವಿಸ್ತರಿಸುವುದು.
2) ಪ್ರತಿವರ್ಷ ಶ್ರೀ ಪುರಂದರ ದಾಸರ ಪುಣ್ಯತಿಥಿಯ ದಿವಸ ಉತ್ಸವವನ್ನು ಏರ್ಪಡಿಸುವುದು.
3) ದಾಸ ಸಾಹಿತ್ಯ, ವಿಶೇಷತಃ ಶ್ರೀ ಪುರಂದರ ದಾಸರ ಧರ್ಮ, ಸಂಗೀತ, ಸಾಹಿತ್ಯಾದಿಗಳನ್ನು ಪ್ರಕಟಿಸುವುದು ಮತ್ತು ಪ್ರಚಾರ ಮಾಡುವುದು.
4) ದಾಸಕೂಟದ ಉತ್ಕರ್ಷಕ್ಕಾಗಿ ಅವಶ್ಯವಾದ ಎಲ್ಲ ಕಾರ್ಯಗಳನ್ನು ಕೈಗೊಳ್ಳುವುದು.

ಮೇಲಿನ ಧ್ಯೇಯೋದ್ದೇಶಗಳನ್ನು ಕಾರ್ಯಾಚರಣೆಗೊಳಿಸಲು ಒಬ್ಬರು ಅಧ್ಯಕ್ಷರನ್ನೊಳಗೊಂಡು 17 ಜನರ ತಾತ್ಕಾಲಿಕ ಕಾರ್ಯಕಾರಿ ಸಮಿತಿ ರಚಿಸಿ, ಕನಿಷ್ಠ 200 ಮಂದಿ ಸದಸ್ಯರನ್ನು ನೊಂದಾಯಿಸಿ ಮುಂದೆ, ಶಾಶ್ವತ ಅಧಿಕಾರ ವರ್ಗವನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಅಲ್ಲದೆ ಅಂದಿನ ಸಭೆಯಲ್ಲಿ ತಾತ್ಪೂರ್ತಿಕ ಕಾರ್ಯಕಾರಿ ಸಮಿತಿಗೆ ಸರ್ವಾನುಮತದಿಂದ ಕೆಳಗಿನವರನ್ನು ಚುನಾಯಿಸಲಾಯಿತು.

| | | |
|---|---|---|
| ಅಧ್ಯಕ್ಷರು | : | ಶ್ರೀ ಆಲೂರು ವೆಂಕಟರಾಯರು, ಧಾರವಾಡ |
| ಉಪಾಧ್ಯಕ್ಷರು | : | ಶ್ರೀ ತಟ್ಟಿ ಕೃಷ್ನರಾಯರು, ಹೊಸಪೇಟೆ, ಶ್ರೀ ಬೂದಿಹಾಳ ಅನಂತಾಚಾರ್ಯರು, ಹೊಸಪೇಟೆ<br>ಶ್ರೀ ಮೊಹರೆ ಹನುಮಂತರಾಯರು, ಹುಬ್ಬಳ್ಳಿ, ಶ್ರೀ ಕರಣಂ ವಾಸುದೇವರಾವ್, ಕಮಲಾಪುರ |
| ಕೋಶಾಧ್ಯಕ್ಷರು | : | ಶ್ರೀ ತಟ್ಟಿ ಕೃಷ್ಣರಾಯರು, ಹೊಸಪೇಟೆ |
| ಕಾರ್ಯದರ್ಶಿಗಳು: | | ಶ್ರೀ ಮತ್ತಿಹಳ್ಳಿ ರಾಘವೇಂದ್ರರಾಯರು, ಹೊಸಪೇಟೆ, ಡಾ. ಕಾಂತಾರಾವ ಕಮಲಾಪುರ, ಧಾರವಾಡ |
| ಸದಸ್ಯರು | : | ಶ್ರೀ ಡಿ. ಗುಂಡುರಾವ್, ಬಳ್ಳಾರಿ, ಶ್ರೀ ಕೋಲಾರು ರಾಮರಾವ್, ಬಳ್ಳಾರಿ<br>ಶ್ರೀ ಸಂಧ್ಯಾವಂದನಂ ಶ್ರೀನಿವಾಸರಾವ್, ಅನಂತಪುರ, ಶ್ರೀ ವೈದ್ಯ ಕೃಷ್ಣಾಚಾರ್ಯರು, ಹೊಸಪೇಟೆ<br>ಶ್ರೀ ಡಾಕ್ಟರ್ ರಾಮರಾವ್, ಹರಪನಹಳ್ಳಿ, ಶ್ರೀ ಡಾಕ್ಟರ್ ಬಿ. ಶ್ರೀನಿವಾಸಮೂರ್ತಿ, ಹಡಗಲಿ<br>ಶ್ರೀ ಬಾಗಲುಕೋಟೆ ಗೋವಿಂದರಾವ್, ಹೈದರಾಬಾದ್, ಶ್ರೀ ಎನ್.ಆರ್. ಗಂಗಾವತಿ, ಗದಗ<br>ಶ್ರೀ ಜಾಲಿಹಾಳ್ ಅನಂತರಾವ್, ಗದಗ, ಶ್ರೀ ಬುರ್ಲಿ ಬಿಂದು ಮಾಧವಾಚಾರ್ಯರು, ಧಾರವಾಡ<br>ಶ್ರೀ ಮೈದೂರು ತಿರುಮಲಾಚಾರ್ಯರು, ಹೊಸಪೇಟೆ, ಶ್ರೀ ರೆಡ್ಡಿ ಕೃಷ್ಣಗೌಡ, ಕಂಪ್ಲಿ |

ಶ್ರೀ ಹೊಳಗುಂದಿ ರಾಘವೇಂದ್ರಾಚಾರ್ಯರು, ಕಾಮಲಾಪುರ, ಶ್ರೀ ಲಕ್ಕುಂಡಿ ವೆಂಕೋಬರಾವ್, ಕೂಡ್ಲಿಗಿ

ಶ್ರೀ ಕೃಷ್ಣರಾವ್ ನಿಲೋಗಲ್, ಕುಷ್ಟಗಿ, ಶ್ರೀ ನರಹರಿ ಆಚಾರ್ಯರು, ಡ್ಯಾಮ್‌ಸೈಟ್

ಪ್ರಸ್ತುತ ಮಂಡಳಿಯು ಕೈಗೊಂಡ ಪ್ರಥಮ ಕಾರ್ಯವೆಂದರೆ ಹಂಪಿಯ ಪುರಂದರ ದಾಸರ ಮಂಟಪದ ಜೀರ್ಣೋದ್ಧಾರ ತುಂಗಭದ್ರಾ ನದಿಯ ಪ್ರವಾಹದ ಹೊಡೆತದ ಪರಿಣಾಮವಾಗಿ ಮಂಟಪ ಶಿಥಿಲಗೊಂಡಿತ್ತು. ಕೇಂದ್ರ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಿ, ಮಂಟಪದ ಜೀರ್ಣೋದ್ಧಾರಕ್ಕೆ ಅನುಮತಿ ಪಡೆದು, ಸಾರ್ವಜನಿಕರಿಂದ ಚಂದಾ ವಸೂಲು ಮಾಡಿ, ಸುಮಾರು ರೂ. 15,000/– ವೆಚ್ಚದಿಂದ ಕೆಲಸವನ್ನು ಪೂರ್ಣಗೊಳಿಸಿತ್ತು. ಈ ಒಟ್ಟು ಮೊತ್ತದಲ್ಲಿ ಆ ಕಾಲದಲ್ಲಿ ಹೈದ್ರಾಬಾದ್ ಸರಕಾರದಿಂದ ರೂ.500/– ಮತ್ತು ಮದರಾಸಿನ ಶ್ರೀ ಕೆ. ಸೀತಾರಾಮರಾಯರಿಂದ ಬಂದ ರೂ.3000/– ಸೇರಿತ್ತು.

ದಿವಂಗತ ಶ್ರೀ ತಟ್ಟಿ ಕೃಷ್ಣರಾಯರು ತಮಗೆ ವಯಸ್ಸಾಗಿದ್ದರೂ ಈ ಕೆಲಸಕ್ಕಾಗಿ ಮುಂಬಯಿ, ಮದ್ರಾಸು, ಬೆಂಗಳೂರು, ಹೈದ್ರಾಬಾದ್ – ಮೊದಲಾದ ನಗರದಲ್ಲಿ ಸಂಚರಿಸಿ ಕಷ್ಟಪಟ್ಟು ಚಂದಾ ವಸೂಲಿಮಾಡಿ, ಮಂಡಳಿಯ ಕೆಲಸಕಾರ್ಯಗಳಲ್ಲಿ ಕ್ರಿಯಾತ್ಮಕವಾಗಿದ್ದೂ ಸ್ಫೂರ್ತಿಯ ಸೆಲೆಯಾಗಿದ್ದರು. ಮಂಡಳಿ ಅವರ ಉಪಕಾರವನ್ನೂ ಎಂದಿಗೂ ಮರೆಯುವಂತಿಲ್ಲ.

ಕನ್ನಡ ಕುಲಪುರೋಹಿತ ಹಾಗೂ ಕುಲಪತಿಗಳೆನಿಸಿದ್ದ ದಿವಂಗತ ಶ್ರೀ ಆಲೂರು ವೆಂಕಟರಾಯರೇ ಮಂಡಳಿಯ ಸಂಸ್ಥಾಪಕ ಹಾಗೂ ಮೊದಲ ಅಧ್ಯಕ್ಷರಾಗಿ ಹಲವಾರು ಸಲಹೆಗಳನ್ನಿತ್ತು ಮಾರ್ಗದರ್ಶನ ನೀಡಿದ್ದರು. ಅವರು ಮಂಡಳಿಯ ದೃಷ್ಟಿಯಲ್ಲಿ ಪ್ರಾತಃಸ್ಮರಣೀಯರು.

ನಂತರ ಹುಬ್ಬಳ್ಳಿಯ ದಿವಂಗತ ಶ್ರೀ ಮೊಹರೆ ಹನುಮಂತರಾಯರು 2–3 ವರ್ಷ ಮಂಡಳಿಯ ಅಧ್ಯಕ್ಷರಾಗಿ ಮಾರ್ಗದರ್ಶನ ಮಾಡಿದರು. ಅವರ ತರುವಾಯ ದಿ. ಶ್ರೀ ತಟ್ಟಿ ಕೃಷ್ಣರಾಯರು ಅಧ್ಯಕ್ಷರಾಗಿದ್ದರು. ನಂತರ ದಿ. ಶ್ರೀ ವಿ. ಕೃಷ್ಣಾಚಾರ್ಯರು, ಶ್ರೀ ತಟ್ಟಿ ರಂಗರಾವ್ ಮಂಡಳಿಯ ಅಧ್ಯಕ್ಷರಾಗಿ, ಶ್ರೀ ಮುದಗಲ್ ವೆಂಕೋಬ ಶೆಟ್ಟರು, ಶ್ರೀ ವಿ. ವೆಂಕಟನಾಗನ್ ಪದಾಧಿಕಾರಿಗಳಾಗಿ ಕಾರ್ಯಚಟುವಟಿಕೆ ಮುಂದುವರಿಸಿದರು. ಅವರ ನಂತರ ಹಿರಿಯರಾದ ಶ್ರೀ ದಂಡಿನ

ರಾಘವೇಂದ್ರರಾಯರು ಅಧ್ಯಕ್ಷರಾಗಿ ಅವಿರತ ಸೇವೆ ಸಲ್ಲಿಸಿದರು. ಅವರ ಅವಧಿಯಲ್ಲಿ ಶ್ರೀ ತಟ್ಟಿ ಮಾಧವರಾವ್, ಶ್ರೀ ಎಂ.ಆರ್. ಕೃಷ್ಣಮೂರ್ತಿ, ಶ್ರೀ ತಿಪ್ಪಯ್ಯ ಶಾಸ್ತ್ರಿ, ಶ್ರೀ ದಂಡಿನ ವಾಸುದೇವರಾವ್, ಶ್ರೀ ತಟ್ಟಿ ಗುರುರಾಜರಾವ್, ಶ್ರೀ ತಟ್ಟಿ ವಾದಿರಾಜ್ ಇವರೆಲ್ಲಾ ಪದಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದರು. ಸದ್ಯ ಡಾ. ಎಂ.ಆರ್. ಮುರಳಿ ಅಧ್ಯಕ್ಷರಾಗಿ, ಡಾ. ವೆಂಕಟೇಶ ಕಾರ್ಯದರ್ಶಿಯಾಗಿ ಶ್ರೀ ತಟ್ಟಿ ಶ್ರೀಧರ ಸಹಕಾರ್ಯದರ್ಶಿಯಾಗಿ ಹಾಗೂ ಶ್ರೀ ತಟ್ಟಿ ರಾಜಾರಾಮ್‌ರವರು ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮಂಡಳಿಯು ಪ್ರತಿ ವರ್ಷ ದಾಸರಾಯರ ಆರಾಧನೆಯನ್ನು, ಸಂಗೀತ ಮಹೋತ್ಸವಗಳನ್ನು ನಡೆಸುತ್ತ ಬಂದಿದೆ. ಇದಕ್ಕೆ ಜನ ಅಂದಿನಿಂದ ಇಂದಿನವರೆಗೂ ತನುಮನಧನಗಳಿಂದ ನೆರವಾಗುತ್ತಿದ್ದಾರೆ. ಸ್ಥಳೀಯ ಹೊಸಪೇಟೆ ಆಕಾಶವಾಣಿಯ ಸಹಯೋಗದೊಂದಿಗೆ ಕೆಲವರ್ಷ ಕಾರ್ಯಕ್ರಮ ನಡೆಸಲಾಯಿತು. ಮಂಡಳಿಯ ಇಂದಿನ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಗೆ ಉದಾರವಾಗಿ ಜನತೆ ಜಾಹಿರಾತುಗಳನ್ನು ನೀಡಿ ಸಹಕರಿಸಿದ್ದಾರೆ.

ಪುರಂದರ ದಾಸರ ತತ್ವಗಳನ್ನು ಪ್ರಚಾರ ಮಾಡುವ ಉದ್ದೇಶದಿಂದ ಮಂಡಳಿಯು ಧಾರವಾಡದ ವಿದ್ಯಾರತ್ನ ಆರ್.ಎಸ್. ಪಂಚಮುಖಿಯವರಿಂದ ಶ್ರೀ ಪುರಂದರ ದಾಸರ ಜೀವನ ಚರಿತ್ರೆ ಎಂಬ ಗ್ರಂಥವನ್ನು ಬರೆಯಿಸಿ ಪ್ರಕಟಿಸಿರುತ್ತದೆ. ಇದೊಂದು ಮಹತ್ವದ ಆಕರ ಗ್ರಂಥವಾಗಿದ್ದು ಅದರ ಪ್ರತಿಗಳೆಲ್ಲಾ ಮುಗಿದಾಗ 1964ರಲ್ಲಿ ನಡೆದ ಶ್ರೀ ದಾಸರ ನಾಲ್ಕನೆಯ ಶತಮಾನೋತ್ಸವದ ಸಂದರ್ಭದಲ್ಲಿ ಈ ಕೃತಿಯ ದ್ವಿತೀಯ ಮುದ್ರಣವನ್ನು ಪ್ರಕಟಿಸಿ ಹಂಚಲಾಯಿತು.

ತಿರುವಾಯೂರಿನಲ್ಲಿ ಪ್ರತಿ ವರ್ಷ ನಡೆಯುವ ಶ್ರೀ ತ್ಯಾಗರಾಜರ ಆರಾಧನೆಯಲ್ಲಿ ನಡೆಸುವ ಸಂಗೀತ ಮಹೋತ್ಸವದಂತೆ ದಾಸರಾಯರ ಆರಾಧನೆಯನ್ನು ಹಂಪಿಯಲ್ಲಿ ವೈಭವದಿಂದ ಸಂಗೀತೋತ್ಸವದೊಂದಿಗೆ ನಡೆಸಬೇಕೆಂಬುದು ಮಂಡಳಿಯ ಬಹುದಿನಗಳ ಕನಸಾಗಿದೆ.

1964 ಜನವರಿ 14ರಂದು ಶ್ರೀ ದಾಸರಾಯರ ನಾಲ್ಕನೆಯ ಶತಮಾನೋತ್ಸವ ಕಾರ್ಯಕ್ರಮ ಅತ್ಯಂತ ವೈಭವ ಪೂರ್ಣವಾಗಿ ಜರುಗಿ ವಿಶೇಷ ಸಂಗೀತೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭವನ್ನು ಅಂದಿನ ಮೈಸೂರಿನ ರಾಜ್ಯಪಾಲರೂ ಅರಸರೂ ಆಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್.

ನಿಜಲಿಂಗಪ್ಪನವರು ವಹಿಸಿದ್ದರು. ಶ್ರೀ ದಾಸರ ನಾಲ್ಕನೆಯ ಶತಮಾನೋತ್ಸವ ಸಂದರ್ಭದ ವಿಶೇಷ ಸಂಗೀತೋತ್ಸವದ ಉದ್ಘಾಟಕರಾಗಿ ಬಿಹಾರ್ ರಾಜ್ಯದ ಮಾಜಿ ರಾಜ್ಯಪಾಲ ಶ್ರೀ ದಿವಾಕರ ರಂಗರಾಯರು ಭಾಗವಹಿಸಿದ್ದರು. ದೇಶದ ಹಲವಾರು ಕಡೆಗಳಿಂದ ಬಂದಿದ್ದ ಸಂಗೀತ ವಿದ್ವಾಂಸರೆಲ್ಲರೂ ತಮ್ಮ ಸೇವೆಯನ್ನು ಕಾರ್ಯಕ್ರಮದಲ್ಲಿ ಸಲ್ಲಿಸಿದರು. 3 ದಿನಗಳ ಕಾಲ ನಡೆದ ವೈಭವದ ಉತ್ಸವದಲ್ಲಿ ಜನವರಿ–14 ರ (1964) ಪ್ರಾತಃಕಾಲ ಶ್ರೀ ವಿರೂಪಾಕ್ಷ ದೇವಾಲಯದಿಂದ ಶ್ರೀ ಪುರಂದರ ದಾಸರ ಚಿತ್ರಪಟದೊಂದಿಗೆ ಭಜನ ಗೋಷ್ಠಿಗಳು ನಾಮ ಸಂಕೀರ್ತನ ಮಾಡುತ್ತ ಮೆರವಣಿಗೆ ಹೊರಟವು. ಇದರಲ್ಲಿ ಬೆಂಗಳೂರಿನ ದಾಸಾಶ್ರಮದ ಸ್ಥಾಪಕ ಶ್ರೀ ಭದ್ರಗಿರಿ ಕೇಶವ ದಾಸರು ಹಾಗೂ ಅವರೊಂದಿಗೆ ಬಂದಿದ್ದ 150 ಜನ ಭಕ್ತರೂ ಇತರ ದಾಸರೂ ಭಾಗವಹಿಸಿದ್ದರು. ಈ ಮೆರವಣಿಗೆ ಮುಂದೆ ಸಾಗಿ ಪುರಂದರ ಮಂಟಪವನ್ನು ತಲುಪಿತು. ಅಲ್ಲಿ ವಿದ್ವಾಂಸರಾದ ಸಂಧ್ಯಾವಂದನಂ ಶ್ರೀನಿವಾಸರಾಯರ ನೇತೃತ್ವದಲ್ಲಿ ಗೋಷ್ಠಿಗಾನ, ಪೂಜೆ ನಡೆದವು. ಮಧ್ಯಾಹ್ನ 2 ಗಂಟೆಗೆ ಸಭಾಮಂಟಪದಲ್ಲಿ ಕಿಕ್ಕಿರಿದು ತುಂಬಿದ್ದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಯಶಸ್ವಿಯಾಗಿ ಸಭಾ ಕಾರ್ಯಕ್ರಮ ನಡೆಯಿತು. ವಿದ್ವಾನ್ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಬಿ. ವೆಂಕಟೇಶಾಚಾರ್ಯರು ಸ್ವಾಗತ ಭಾಷಣ ಮಾಡಿದರು. ಉದ್ಘಾಟಕರಾಗಿ ಆಗಮಿಸಿದ್ದ ರಾಜ್ಯಪಾಲ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸ್ಫೂರ್ತಿಯುತವಾದ ಭಾಷಣ ನೀಡಿ ಜನರನ್ನು ಮಂತ್ರಮುಗ್ಧಗೊಳಿಸಿದರು. ಸಭೆಯ ಮುಕ್ತಾಯದ ನಂತರ ನಾಡಿನ ಪ್ರಸಿದ್ಧ ಸಂಗೀತ ವಿದ್ವಾಂಸರೂ ಹರಿಕಥಾ ಕೀರ್ತನಕಾರರೂ ತಮ್ಮ ಸೇವೆಸಲ್ಲಿಸಿದರು.

ಸಂಜೆ 6 ಗಂಟೆಗೆ ಗಾನಕೋಗಿಲೆ ವಿದುಷಿ ಶ್ರೀಮತಿ ಸುಬ್ಬಲಕ್ಷ್ಮಿಯವರು ಒಂದೂವರೆ ಗಂಟೆಗಳ ಕಾಲ ಪುರಂದರ ದಾಸರ ಕೀರ್ತನೆಗಳನ್ನು ಹಾಡಿ ಸಭಿಕರನ್ನು ತನ್ಮಯಗೊಳಿಸಿದರು. ಈ ಕಾರ್ಯಕ್ರಮವು ಅದೇ ರಾತ್ರಿ 9.30 ಗಂಟೆಗೆ ಅಂದಿನ ಎಲ್ಲಾ ಆಕಾಶವಾಣಿ ಕೇಂದ್ರಗಳಿಂದ ಪ್ರಸಾರವಾಯಿತು. ಮಧ್ಯರಾತ್ರಿಯವರೆಗೆ ವಿವಿಧ ಸಂಗೀತ ವಿದುಷಿ ಹಾಗೂ ವಿದ್ವಂಸರ ಸೇವೆ ನಡೆಯಿತು. ಶ್ರೀ ಪುರಂದರ ದಾಸರ ನಾಲ್ಕನೆಯ ಶತಮಾನೋತ್ಸವ ಸಮಿತಿ, ಬೆಂಗಳೂರು ಹಾಗೂ ಹೊಸಪೇಟೆಯ ನಮ್ಮ ಪುರಂದರದಾಸ ಸೇವಾ ಮಂಡಳಿಯ ಸಂಯುಕ್ತ ಆಶ್ರಯದಲ್ಲಿ ನಡೆದ ಈ ಮೂರು ದಿನಗಳ ಕಾರ್ಯಕ್ರಮ ನಮ್ಮ ಮಂಡಳಿಯ ಇತಿಹಾಸದಲ್ಲಿ ಅವಿಸ್ಮರಣೀಯ ಅಂಶ. ಈ ಸಂದರ್ಭದಲ್ಲಿ ಹೊರ ಬಂದ ಶ್ರೀ ದಾಸರ ಸ್ಮರಣ ಸಂಚಿಕೆ ಇಂದಿಗೂ ಒಂದು ಪ್ರಮುಖ ಆಕರಗ್ರಂಥ ಎನ್ನಬಹುದು. ನಾಲ್ಕನೆಯ ಶತಮಾನೋಸವದ ನೆನಪಿನಲ್ಲಿ ಕೇಂದ್ರ ಸರ್ಕಾರದ ಅಂಚೆ ಇಲಾಖೆಯವರು ದಾಸರಾಯರ ವಿಶೇಷ ಅಂಚೆ ಚೀಟಿಯನ್ನು ಬಿಡುಗಡೆಗೊಳಿಸಿದ್ದು ಸ್ಮರಣೀಯ ಸಂಗತಿ.

ಪ್ರಸ್ತುತ ಮಂಡಳಿಯು ನಿರಂತರವಾಗಿ ಹೊಸಪೇಟೆಯಲ್ಲಿ ದಾಸರ ಆರಾಧನೆಯ ನಿಮಿತ್ತ ವಿಶೇಷ ಸಂಗೀತ ಮಹೋತ್ಸವವನ್ನು ಕಳೆದ 50 ವರ್ಷಗಳಿಂದ ನಡೆಸುತ್ತ ಬಂದಿದೆ. ನಾಡಿನ ಹಿರಿ–ಕಿರಿಯ ವಿದ್ವಾಂಸರೆಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತ ಬಂದಿದ್ದಾರೆ. ಬೆಂಗಳೂರಿನಿಂದ ಕಲಾವಿದರನ್ನೂ ಆಯೋಜಿಸಿಕೊಟ್ಟು ನಮ್ಮ ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಸಹಕರಿಸಿ ನಮ್ಮ ಸಂಸ್ಥೆಗೆ ನಿರಂತರ ಸೇವೆಸಲ್ಲಿಸುತ್ತ ಬಂದಿರುವ ರಾಜಶ್ರೀ ಶ್ರೀನಿವಾಸ ಅಯ್ಯಂಗಾರ್ ಮತ್ತು ನಾಡಿನ ಪ್ರಸಿದ್ ವಯಲಿನ್ ವಾದಕ ವಿದ್ವಾನ್ ಶ್ರೀ ಜಕ್ರಯ್ಯನವರನ್ನೂ ನಾವು ಮರೆಯುವಂತಿಲ್ಲ.

ಮಂಡಳಿಯು ನಡೆಸುವ ಆರಾಧನೆಯ ಸಂದರ್ಭದಲ್ಲಿ ನಮ್ಮ ಸದಸ್ಯರಾಗಿದ್ದ ಮುದಗಲ್ ವೆಂಕೋಬಶೆಟ್ರ ಸ್ಮರಣಾರ್ಥವಾಗಿ ನಡೆಸುವ 'ದಾಸರ ಕೀರ್ತನೆ'ಗಳ ಸ್ಪರ್ಧೆಗೆ ಅವರ ಕುಟುಂಬದವರು ಇಂದಿಗೂ ಬಹುಮಾನದ ಹಣವನ್ನು ನೀಡುತ್ತಾ ಬಂದಿದ್ದಾರೆ. ಹಾಗೆಯೇ ಶ್ರೀ ತೋರಾಕೋಟಿ ಚಂದ್ರಶೇಖರಯ್ಯನವರ ದತ್ತಿ ನಿಧಿಯಿಂದ ದಾಸರ 'ಉಗಾಭೋಗ' ಸ್ಪರ್ಧೆಯನ್ನು ಸಾರ್ವಜನಿಕರಿಗೆ ನಡೆಸಲಾಗುತ್ತದೆ. ಈ ಮಹನೀಯರುಗಳಿಗೆ ನಾವು ಸದಾ ಋಣಿ.

ಪ್ರಸ್ತುತ ಈ ಮಂಡಳಿಯು ತನ್ನ 50ನೇ ವರ್ಷದ ಸುವರ್ಣ ಮಹೋತ್ಸವದ ನೆನಪಿನಲ್ಲಿ **'ಪುರಂದರ ನಮನ'**ವೆಂಬ ಸ್ಮರಣ ಸಂಚಿಕೆಯನ್ನು ಹೊರತರುತ್ತಿದೆ. ಈ ಸಂಚಿಕೆಗೆ ಲೇಖನಗಳನ್ನು ನೀಡಿದ ಲೇಖಕರಿಗೆ ಹಾಗೂ ಉದಾರವಾಗಿ ಜಾಹಿರಾತು ನೀಡಿದ ಜಾಹಿರಾತುದಾರರಿಗೆ ನಮ್ಮ ಕೃತಜ್ಞತೆಗಳು. ಜೊತೆಗೆ ಬೆಂಗಳೂರಿನ 'ಭಕ್ತಿ ಭಾರತಿ' ಪ್ರತಿಷ್ಠಾನದ ಸಹಯೋಗದೊಂದಿಗೆ 3 ದಿನಗಳವರೆಗೆ ಹಮ್ಮಿಕೊಂಡಿರುವ ಶ್ರೀದಾಸರಾಯರ ಆರಾಧನೆ ಹಾಗೂ ವಿಶೇಷ ಸಂಗೀತ ಮಹೋತ್ಸವಕ್ಕೆ ಕಾರಣೀಭೂತರಾಗಿರುವ ಸಂಗೀತ ವಿದ್ಯಾನಿಧಿ ಶ್ರೀ ವಿದ್ಯಾಭೂಷಣರಿಗೂ ಈ ಕಾರ್ಯಕ್ರಮ ಯಶಸ್ವಿಯಾಗುವಂತೆ ತ್ರಿಕರಣ ಪೂರ್ವಕವಾಗಿ ಸಹಕರಿಸಿದ ಎಲ್ಲರಿಗೂ ಅನಂತನಮನಗಳು.

**ಶ್ರೀ ಪುರಂದರದಾಸ ಸೇವಾ ಮಂಡಳಿ**

ಹೊಸಪೇಟೆ.